ನಿಮ್ಮೊಡನೆ

ಅತ್ಯಾಚಾರಕ್ಕೆ ಧಿಕ್ಕಾರ

ಸುಧಾ ಕಾಳಜಿ

# ಎಲ್ಲಿಗೆ ಪಯಣ, ಯಾವುದು ಕೊನೆ

ಮನುಷ್ಯತ್ವ ಮತ್ತು ಪೈಶಾಚಿಕ ಪ್ರವೃತ್ತಿ ಸಮಾಜವೆನ್ನುವ ಒಂದೇ ನಾಣ್ಯದ ಎರಡು ಮುಖಗಳೆನ್ನುವುದಕ್ಕೆ ಮತ್ತೊಂದು ಉದಾಹರಣೆ ದೊರೆತಿದೆ. ಹೈದರಾಬಾದ್‌ನ ಪಶುವೈದ್ಯೆಯ ಮೇಲೆ ನಡೆದ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳ ಮೇಲೆ ಎನ್‌ಕೌಂಟರ್ ನಡೆದಿದೆ. ಅದರ ಬೆನ್ನಿಗೇ, ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿದ್ದ ಸಂತ್ರಸ್ತೆಯನ್ನು ಆರೋಪಿಯೇ ಸಜೀವವಾಗಿ ದಹಿಸಿದ ಘಟನೆಗೆ ಉತ್ತರಪ್ರದೇಶ ಸಾಕ್ಷಿಯಾಗಿದೆ. ಎನ್‌ಕೌಂಟರ್ ಘಟನೆಗೆ ನಿಟ್ಟುಸಿರುಬಿಡುತ್ತಲೇ ಸಜೀವದಹನದ ಘಟನೆಗೆ ಹನಿಗಣ್ಣಾಗಬೇಕಾದ ಸಂದರ್ಭ ಜನಸಾಮಾನ್ಯರದು. ಅತ್ಯಾಚಾರದ ಘಟನೆಗಳ ಕುರಿತ ಸಮಾಜದ ಸ್ಪಂದನವನ್ನು ಮನುಷ್ಯತ್ವ ಎನ್ನುವುದಾದರೆ, ಸಂತ್ರಸ್ತರ ಸಾವುಗಳು ಪೈಶಾಚಿಕ ಕೃತ್ಯದ ಫಲಗಳಾಗಿವೆ. ಈ ಸರಳೀಕರಣದ ಜೊತೆಯಲ್ಲಿಯೇ ಬಹುಸಂಖ್ಯೆಯ ಜನರು ಎನ್‌ಕೌಂಟರ್ ಬಗ್ಗೆ ವ್ಯಕ್ತಪಡಿಸಿರುವ ಸಮ್ಮತಿಯನ್ನು ಗಮನಿಸಬೇಕು ಹಾಗೂ ಇವೆಲ್ಲ ಘಟನೆಗಳು ಏನನ್ನು ಸೂಚಿಸುತ್ತವೆ ಎನ್ನುವುದನ್ನು ಯೋಚಿಸಬೇಕು.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆಯಾಗಬೇಕು; ಆರೋಗ್ಯಕರ ಸಮಾಜದಲ್ಲಿ ಬದುಕಲಿಕ್ಕೆ ಅವರು ಯೋಗ್ಯರಲ್ಲ ಎನ್ನುವುದರ ಬಗ್ಗೆ ಯಾರಿಗೂ ತಕರಾರಿಲ್ಲ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಶಿಕ್ಷೆಯಾಗಲು ರೀತಿರಿವಾಜುಗಳಿವೆ. ತಾನೇ ರೂಪಿಸಿಕೊಂಡ ಸಂಹಿತೆಯನ್ನು ತಾನೇ ಉಲ್ಲಂಘಿಸುವುದು ವ್ಯವಸ್ಥೆಯ ಅರಾಜಕತೆಯನ್ನು ಸೂಚಿಸುತ್ತದೆ, ಇಲ್ಲವೇ ಅದು ವ್ಯವಸ್ಥೆಯನ್ನು ಶಿಥಿಲಗೊಳಿಸುವ ಪ್ರಯತ್ನವಾಗಿರುತ್ತದೆ. ‘ಎನ್‌ಕೌಂಟರ್ ನ್ಯಾಯ’ವನ್ನು ಸರಿಯೆಂದೇ ತರ್ಕಕ್ಕಾಗಿ ಒಪ್ಪಿಕೊಳ್ಳೋಣ. ಹಾಗೆ ಒಪ್ಪಿಕೊಂಡು ಎನ್‌ಕೌಂಟರ್ ನ್ಯಾಯಪದ್ಧತಿಯನ್ನು ಅನುಸರಿಸುತ್ತಾ ಹೋದಾಗ, ಬಂದೂಕಿನ ಗುರಿ ಯಾರ ಯಾರ ಮನೆಯ ಅಂಗಳಗಳತ್ತ ತಿರುಗುವುದೆಂದು ಹೇಳಲಾಗದು. ಶೇ. 96 ಅತ್ಯಾಚಾರಗಳು ಪರಿಚಯದ ವ್ಯಕ್ತಿಗಳಿಂದಲೇ ನಡೆಯುತ್ತವೆ ಎನ್ನುವ ಅಂಕಿಅಂಶಗಳ ಹಿನ್ನೆಲೆಯಲ್ಲಿ, ಬಂದೂಕಿನ ಮೂಲಕವೇ ಉತ್ತರ ಕಂಡುಕೊಳ್ಳಲು ಹೋಗುವುದು ಕೌಟುಂಬಿಕ ನೆಲೆಗಟ್ಟನ್ನೇ ಬುಡಮೇಲು ಮಾಡತೊಡಗಿ, ಸಾಮಾಜಿಕ ಕ್ಷೋಭೆಗೆ ಕಾರಣವಾಗಬಹುದು. ಈ ಕ್ಷೋಭೆಯನ್ನು ತಡೆಯುವುದಾದರೆ ನಮಗುಳಿದಿರುವ ದಾರಿಯೇನು? ಅದು ಪ್ರಜಾಸತ್ತಾತ್ಮಕ ಮಾರ್ಗದ ಅನುಸರಣೆಯಲ್ಲದೆ ಬೇರೇನೂ ಅಲ್ಲ. ಸಮಸ್ಯೆ ಬೇರೆಯವರದಾಗಿದ್ದಾಗ ನಾವು ವ್ಯವಸ್ಥೆಯಿಂದ ಹೊರತಾದ ದಮನಾತ್ಮಕ ಮಾರ್ಗಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸುತ್ತೇವೆ. ಆದರೆ, ಅಪಾಯ ನಮ್ಮ ಕಾಲಬುಡಕ್ಕೆ ಬಂದಾಗ ಅದರಿಂದ ಪಾರಾಗಲು ಪ್ರಜಾಸತ್ತಾತ್ಮಕ ಕ್ರಮಗಳನ್ನು ಹುಡುಕುತ್ತೇವೆ. ಇದರರ್ಥ ಇಷ್ಟೇ: ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ಪ್ರತಿಯೊಬ್ಬರಿಗೂ ಅವರನ್ನು ರಕ್ಷಿಸಿಕೊಳ್ಳಲು ಅವಕಾಶ ನೀಡಿದೆ. ತಪ್ಪುಗಳು ಸಂಭವಿಸಿದಾಗ ಅದಕ್ಕೆ ಕಠಿಣ ಶಿಕ್ಷೆಯೂ ವ್ಯವಸ್ಥೆಯಲ್ಲಿದೆ. ಹಾಗೆ ಶಿಕ್ಷಿಸುವ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳದಂತೆ ಸಾಕಷ್ಟು ಮುನ್ನೆಚ್ಚರಿಕೆಯ ಕ್ರಮಗಳನ್ನೂ ಕೈಗೊಂಡಿದೆ. ಕೆಲವೊಮ್ಮೆ ಈ ಮಾರ್ಗ ನಮಗೆ ವಿಳಂಬ ಅನ್ನಿಸಬಹುದು. ಆದರೆ, ಅಮಾಯಕರು ಪಿತೂರಿಗೆ–ಶಿಕ್ಷೆಗೆ ಬಲಿಯಾಗುವುದನ್ನು ತಪ್ಪಿಸಲಿಕ್ಕಾಗಿ ಸಂವಿಧಾನ ಹಾಕಿಕೊಟ್ಟ ಮಾರ್ಗಕ್ಕೆ ಬದ್ಧರಾಗದೆ ವಿಧಿಯಿಲ್ಲ. ಯಾವಾಗ ಅಡ್ಡದಾರಿಯನ್ನು ಒಪ್ಪಿಕೊಳ್ಳತೊಡಗುತ್ತೇವೆಯೋ, ಆ ಕ್ಷಣದಿಂದಲೇ ನಮಗೆ ಅರಿವಿಲ್ಲದಂತೆಯೇ ನಮ್ಮ ಸೂರಿಗೆ ನಾವೇ ರಂಧ್ರ ಕೊರೆಯತೊಡಗುತ್ತೇವೆ.

ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರತಿಯೊಬ್ಬರಿಗೂ ಅವರನ್ನು ರಕ್ಷಿಸಿಕೊಳ್ಳಲು ಅವಕಾಶ ನೀಡಿದೆ. ತಪ್ಪುಗಳು ಸಂಭವಿಸಿದಾಗ ಅದಕ್ಕೆ ಕಠಿಣ ಶಿಕ್ಷೆಯೂ ವ್ಯವಸ್ಥೆಯಲ್ಲಿದೆ. ಹಾಗೆ ಶಿಕ್ಷಿಸುವ ಅವಕಾಶವನ್ನು ದುರುಪಯೋಗ ಮಾಡಿಕೊಳ್ಳದಂತೆ ಸಾಕಷ್ಟು ಮುನ್ನೆಚ್ಚರಿಕೆಯ ಕ್ರಮಗಳನ್ನೂ ಕೈಗೊಂಡಿದೆ.

ಅತ್ಯಾಚಾರದ ಪ್ರಕರಣಗಳು ಹಾಗೂ ಅದಕ್ಕೆ ಉತ್ತರ ಎನ್ನಲಾಗುತ್ತಿರುವ ಎನ್‌ಕೌಂಟರ್ ನಮ್ಮ ಸಾಮಾಜಿಕ ವಿವೇಕದ ಮರುಪರಿಶೀಲನೆಗೆ ಕಾರಣವಾಗಬೇಕು. ಜರೂರಾಗಿ ಆಗಬೇಕಿರುವುದು ಎರಡು ಕೆಲಸ. ಶಿಕ್ಷಣದ ನೆಲೆಗಟ್ಟಿನಲ್ಲಿ ನೈತಿಕತೆಯನ್ನು ಪರಿಣಾಮಕಾರಿಯಾಗಿ ಅಳವಡಿಸುವ ಪ್ರಕ್ರಿಯೆ ಮೊದಲನೆಯದು. ಶಾಲಾಮಟ್ಟದಲ್ಲಿ ಹಾಗೂ ಮನೆಗಳಲ್ಲಿ ಲಿಂಗತಾರತಮ್ಯವನ್ನು ಚಿವುಟಿ ಹಾಕುವ ಹಾಗೂ ಮಕ್ಕಳ ಮನಸ್ಸನ್ನು ತಿಳಿಗೊಳಿಸುವ ಕೆಲಸ ನಡೆದರೆ, ನಮ್ಮ ಮುಂದಿನ ತಲೆಮಾರು ಹೆಚ್ಚು ಪ್ರಾಂಜಲವಾಗಿರಬಲ್ಲದು. ಇದಕ್ಕೆ ಪೂರಕವಾಗಿ ನಡೆಯಬೇಕಾದ ಮತ್ತೊಂದು ಕೆಲಸ, ಪ್ರಜಾಪ್ರಭುತ್ವದ ಸಾಧ್ಯತೆಗಳ ಅರಿವನ್ನು, ಎಲ್ಲರಿಗೂ ಬದುಕಲು ಅವಕಾಶ ಮಾಡಿಕೊಟ್ಟಿರುವ ಸಂವಿಧಾನದ ಪರಿಚಯವನ್ನು ಸಾರ್ವತ್ರಿಕವಾಗಿ ಪರಿಚಯಿಸುವ ಆಂದೋಲನ ರೂಪಿಸುವುದು. ‘ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ’ ಎನ್ನುವ ಹೇಳಿಕೆಯ ಹೊರತಾಗಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಕುರಿತ ನಮ್ಮ ತಿಳಿವಳಿಕೆ ಅಷ್ಟಕ್ಕಷ್ಟೇ. ಆ ತಿಳಿವು ವಿಸ್ತಾರಗೊಂಡಾಗಷ್ಟೇ ಸಮಕಾಲೀನ ಬರ್ಬರ ಘಟನೆಗಳಿಗೆ ನಾವು ಹೇಗೆ ಪ್ರತಿಕ್ರಿಯಿಸಬೇಕೆನ್ನುವ ವಿವೇಕವನ್ನು ರೂಪಿಸುತ್ತದೆ. ಪ್ರಜಾಪ್ರಭುತ್ವದ ಅರಿವು ವ್ಯಕ್ತಿಗತ ಬದುಕನ್ನು ಉನ್ನತಗೊಳಿಸುವುದಲ್ಲದೆ, ಸಾಮಾಜಿಕ ಆರೋಗ್ಯಕ್ಕೂ ಪುಷ್ಟಿಕರವಾದುದು.

ಹೆಣ್ಣಿನ ಮೇಲಿನ ಲೈಂಗಿಕ ದೌರ್ಜನ್ಯಗಳು ಹಾಗೂ ಕ್ರೌರ್ಯ ನಮ್ಮ ಸಾಮಾಜಿಕ ವ್ಯವಸ್ಥೆ ಅಂತರ್ಗತವಾಗಿ ಕೊಳೆತಿರುವುದಕ್ಕೆ ಸಾಕ್ಷಿ. ಕೊಳೆತ ಭಾಗಗಳನ್ನು ಬಂದೂಕಿನಿಂದ ಛೇದಿಸಲು ಹೊರಡುವುದು ಸುಲಭ ಪರಿಹಾರ ಎನ್ನಿಸಬಹುದು. ಆದರೆ, ಭಯ ಹುಟ್ಟಿಸುವ ಮೂಲಕ, ಕೊಲ್ಲುವ ಮೂಲಕ ಕಂಡುಕೊಳ್ಳುವ ಪರಿಹಾರಗಳ ಆಯುಸ್ಸು ಕಡಿಮೆ ಎನ್ನುವುದಕ್ಕೆ ಎಲ್ಲ ದೇಶ–ಕಾಲಗಳ ಚರಿತ್ರೆ ಉದಾಹರಣೆಯಾಗಿದೆ. ಆಗಬೇಕಿರುವುದು ಬೇರುಮಟ್ಟದಲ್ಲಿ ಸರಿಪಡಿಸುವ ಕೆಲಸ. ಆ ಕೆಲಸ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಆ ಮೌಲ್ಯಗಳ ಮೂರ್ತರೂಪವಾದ ಸಂವಿಧಾನದ ಅನುಸರಣೆಯಿಂದಷ್ಟೇ ಸಾಧ್ಯ.

■ ರಘುನಾಥ ಚ.ಹ.